# ‘ಸುರ್ ಬಹಾರ್’ನಲ್ಲಿ ಲೀನವಾದ ಅನ್ನಪೂರ್ಣಾದೇವಿ

ಹಿಂದುಸ್ತಾನಿ ಸಂಗೀತದ ಮೇರು ಪ್ರತಿಭೆಗಳಲ್ಲೊಬ್ಬರು ಅನ್ನಪೂರ್ಣಾದೇವಿ. ಆದರೆ, ಅವರ ಹಾಡುಗಾರಿಕೆ ಸಹೃದಯರ ಪಾಲಿಗೆ ಗಂಧರ್ವ ಸ್ವಪ್ನದಂತೆಯೇ ಉಳಿಯಿತು. ಹಾಡುಗಾರಿಕೆಗಿಂತಲೂ ಹೆಚ್ಚಾಗಿ ಜೀವನದ ಅಜ್ಞಾತ ವಿವರಗಳು ರೂಪಿಸಿದ ಕಥೆಗಳ ಮೂಲಕವೇ ಅನ್ನಪೂರ್ಣಾದೇವಿ ಹೆಚ್ಚು ಪ್ರಸಿದ್ಧರು.

■ **ಶೈಲಜ, ಟಿ.ಎಸ್. ವೇಣುಗೋಪಾಲ್**



1. ಸೋಮವಾರ ಮತ್ತು ಶುಕ್ರವಾರ ಬಾಗಿಲು ತೆಗೆಯುವುದಿಲ್ಲ!
2. ದಯಮಾಡಿ ಕಾಲಿಂಗ್ ಬೆಲ್ ಕೇವಲ ಮೂರು ಸಲ ಒತ್ತಿರಿ!
3. ಬಾಗಿಲು ತೆಗೆಯದಿದ್ದರೆ ದಯಮಾಡಿ ತಮ್ಮ ಹೆಸರು ಮತ್ತು ವಿಳಾಸವನ್ನು ಬಿಟ್ಟು ಹೋಗಿ. ಧನ್ಯವಾದಗಳು. ತೊಂದರೆಗೆ ಕ್ಷಮೆ ಇರಲಿ!

ಇದು ಮುಂಬಯಿಯ ಅನ್ನಪೂರ್ಣಾದೇವಿಯವರ ಅಪಾರ್ಟ್‌ಮೆಂಟಿನ ಮುಂದೆ ನಿಮ್ಮನ್ನು ಎದುರುಗೊಳ್ಳುವ ಫಲಕ. ಇವರು ಅಲ್ಲಾವುದ್ದೀನ್ ಖಾನರ ಮಗಳು, ರವಿಶಂಕರರ ಪತ್ನಿ, ಅಲಿ ಅಕ್ಬರ್‌ಖಾನರ ತಂಗಿ, ಖ್ಯಾತ ಸುರ್‌ಬಹಾರ್ ವಾದಕಿ. “ಅನ್ನಪೂರ್ಣಾದೇವಿ ಅಲ್ಲಾವುದ್ದೀನ್‌ಖಾನ್‌ರ ಸಂಗೀತವನ್ನು ಶೇ. 80ರಷ್ಟು ಮೈಗೂಡಿಸಿಕೊಂಡಿದ್ದರು; ಅಲಿ ಅಕ್ಬರ್ ಖಾನ್ ಅವರು ಶೇ. 70ರಷ್ಟು ಮತ್ತು ರವಿಶಂಕರ್ ಶೇ. 40ರಷ್ಟು ಮೈಗೂಡಿಸಿಕೊಂಡಿದ್ದರು” ಎಂದು ಅವರ ಸಂಗೀತದ ಔನ್ನತ್ಯವನ್ನು ಕುರಿತ ಮಾತಿದೆ. ಆದರೆ ಅವರು ಸಾರ್ವಜನಿಕ ಕಾರ್ಯಕ್ರಮ ನೀಡುವುದಿರಲಿ, ಖಾಸಗಿಯಾಗಿಯೂ ಯಾರ ಮುಂದೆಯೂ ನುಡಿಸುತ್ತಿರಲಿಲ್ಲ. ಒಮ್ಮೆ ಅವರ ಕಛೇರಿ ಕೇಳಬೇಕೆಂದು ಯಹೂದಿ ಮೆನುಹಿನ್ ಮತ್ತು ಜಾರ್ಜ್ ಹ್ಯಾರಿಸನ್ ತುಂಬಾ ಆಸೆಪಟ್ಟರಂತೆ. ಆದರೆ ಅವರೊಪ್ಪಲಿಲ್ಲ. ಆನಂತರ ಇಂದಿರಾ ಗಾಂಧಿಯವರೂ ಸೇರಿದಂತೆ ಹಲವರ ಒತ್ತಾಯಕ್ಕೆ ಮಣಿದು, ಒಲ್ಲದ ಮನಸ್ಸಿನಿಂದ ‘ತಾನು ಅಭ್ಯಾಸ ಮಾಡುವಾಗ ಬೇಕಾದರೆ ಕೇಳಿಕೊಂಡು ಹೋಗಲಿ’ ಅಂದರಂತೆ. ಅದ್ಯಾಕೋ ಅವರು ಏಕಾಂತದ ಬದುಕಿಗೆ ಆತುಕೊಂಡಿದ್ದರು. “ನಾನು ಸಾರ್ವಜನಿಕ ಕಾರ್ಯಕ್ರಮದಿಂದ ಹಿಂದೆ ಸರಿದದ್ದಕ್ಕೆ ನಿಜವಾದ ಕಾರಣ ನನ್ನೊಂದಿಗೇ ನನ್ನ ಗೋರಿಯಲ್ಲಿ ಮುಚ್ಚಿಹೋಗುತ್ತದೆ” ಎಂದರು ಅಷ್ಟೆ. ಇದು ಹಲವಾರು ಕಥೆಗಳಿಗೆ, ಊಹಾಪೋಹಗಳಿಗೆ ಕಾರಣವಾಗಿದೆ. ಅದೇನೇ ಇರಲಿ – ಅವರ ಬದುಕು, ವ್ಯಕ್ತಿತ್ವ, ಸಂಗೀತ ಇವುಗಳ ಕುರಿತ ಮೌಲ್ಯಯುತ ಕಿರುನೋಟಗಳು ನಮಗೆ ಸಿಗುವುದು ಅವರ ಮನೆಯವರು ಹಾಗೂ ಶಿಷ್ಯರಿಂದ.

ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಬಾಬಾ ಅಲ್ಲಾವುದ್ದೀನ್ ಖಾನ್ ನೀಡಿದ ಬಹುದೊಡ್ಡ ಕೊಡುಗೆ ಬಹುಶಃ ಅನ್ನಪೂರ್ಣಾದೇವಿ. ಮೈಹರಿನ ಮಹಾರಾಜ ಬೃಜನಾಥ್ ಆ ಮಗುವನ್ನು ಅನ್ನಪೂರ್ಣಾ ಎಂದು ಕರೆದರು. ಅದು ಐಶ್ವರ್ಯ ಹಾಗು ಸಮೃದ್ಧಿಯ ಸಂಕೇತವಾದ ಭಾರತೀಯ ದೇವತೆಯ ಹೆಸರು. ಮನೆಯಲ್ಲಿ ಬಾಬಾ ಕರೆದ ಹೆಸರು ರೋಶನಾರಾ.